ಡಾ॥ ಎ.ಬಿ. ಮಾಲಕರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾವು ಸಾಕಷ್ಟು ರಿಮೈಂಡರ್ಸ್ ಕಳುಹಿಸಿದ್ದೇವೆ. ಒಂದು ವಾರದಿಂದ ನಾವು ಅದರಿಂದ ನಿರೀಕ್ಷೆ ಮಾಡುತ್ತಿದ್ದೇವೆ. ಒಂದು ವಾರದ ನಂತರ ಈ ನೇಮಕಾತಿ ಪ್ರಾರಂಭವಾಗಿ ಖಾಲಿ ಸ್ಥಳಗಳಲ್ಲಿ ಈ ವೈದ್ಯರನ್ನು ನೇಮಕ ಮಾಡುತ್ತೇವೆ.

ಶ್ರೀ ವಡ್ನಾಳ್ ರಾಜಣ್ಣ : ಮಾನ್ಯ ಅಧ್ಯಕ್ಷರೇ, ಆರು ತಿಂಗಳಾದರೂ ಪರವಾಗಿಲ್ಲ ಚನ್ನಗಿರಿ ಕ್ಷೇತ್ರಕ್ಕೆ ಮಹಿಳಾ ವೈದ್ಯರನ್ನು ಕೊಡುತ್ತೇವೆನ್ನುವ ಭರವಸೆಯನ್ನು ಅವರು ಕೊಡಬೇಕೆಂದು ತಮ್ಮ ಮೂಲಕ ನಾನು ಹೇಳುತ್ತೇವೆ.

ಡಾ॥ ಎ.ಬಿ. ಮಾಲಕರೆಡ್ಡಿ : ಮಾನ್ಯ ಅಧ್ಯಕ್ಷರೇ, ಈ ಮಹಿಳಾ ವೈದ್ಯರುಗಳ ನೇಮಕಾತಿ ವಿಚಾರ ನಮಗೆ ದೊಡ್ಡ ಸಮಸ್ಯೆಯಾಗಿದೆ. ನಮ್ಮ ಮಿತ್ರರಾದ ಮಾನ್ಯ ಅರಗ ಜ್ಞಾನೇಂದ್ರರವರು ಬಂದಿಲ್ಲ. ಅವರು ಒಂದು ಪ್ರಶ್ನೆ ಕೇಳಿದ್ದರು. ಅವರ ಕ್ಷೇತ್ರದಲ್ಲಿಯೂ ಕೂಡ ಮಹಿಳಾ ವೈದ್ಯಾಧಿಕಾರಿಗಳಿಲ್ಲ. ಏಳು ಜನರಿಗೆ ಪೋಸ್ಟ್ ಮಾಡಿದರೂ ಕೂಡ ಯಾರೂ ಅಲ್ಲಿ ರಿಪೋರ್ಟ್ ಮಾಡಿಕೊಂಡು ಕೆಲಸ ಮಾಡುವುದಕ್ಕೆ ತಯಾರಿಲ್ಲ. ಆದರೂ ನಾನು ಪ್ರಯತ್ನ ಮಾಡುತ್ತೇನೆ. ಈಗ ಹೊಸದಾಗಿ ಆಯ್ಕೆಯಾದ ವೈದ್ಯರಲ್ಲಿ ಯಾರಾದರೂ ಇದ್ದರೆ ಅವರನ್ನು ಖಂಡಿತವಾಗಿ ಚನ್ನಗಿರಿ ತಾಲ್ಲೂಕಿನ ಆಸ್ಪತ್ರೆಗೆ ನಾನು ನೇಮಕ ಮಾಡುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ : ಹಿಂದೆ ಒಬ್ಬರು ನಾಗಪ್ಪ ಹಳೂರು ಆರೋಗ್ಯ ಸಚಿವರಿದ್ದರು. ಇದೇ ತರಹದ ಪ್ರಶ್ನೆ ಒಂದೆರಡು ಸಾರಿ ಬಂದಾಗ ಅವರು ಒಂದೇ ಮಾತನ್ನು ಹೇಳಿದರು. ಸತ್ಯಕ್ಕೆ ವೈದ್ಯರ ಕೊರತೆ ಇರುವುದರಿಂದ ಒಬ್ಬ ನರ್ಸ್ ಕೊಟ್ಟರೆ ಸಾಕು ಎಂದು ಹೇಳಿದ್ದರು.

ಶ್ರೀ ವಡ್ನಾಳ್ ರಾಜಣ್ಣ : ಚನ್ನಗಿರಿ ಆಸ್ಪತ್ರೆಯಲ್ಲಿರತಕ್ಕಂತಹ ವೈದ್ಯರ ಪರಿಸ್ಥಿತಿ ಹೇಗಿದೆ ಎಂದರೆ, ಅಲ್ಲಿ ಅವರಿಗೆ ಸಾಕಾಗುವಷ್ಟು ವಸತಿ ಇಲ್ಲದೆ ಇರಬಹುದು, ಇರತಕ್ಕಂತಹ ವಸತಿಯೊಳಗೆ ಇದ್ದುಕೊಂಡು ಅವರು ಕರ್ತವ್ಯವನ್ನು ನಿರ್ವಹಿಸಬೇಕು. ಏಕೆಂದರೆ, ಯಾರೇ ಒಬ್ಬ ಡಾಕ್ಟರ್ ರಾತ್ರಿ ಹೊತ್ತು ರೋಗಿ ಬಳಿ ಹೋದಂತಹ ಸಂದರ್ಭದಲ್ಲಿ ಅವರಿಗೆ ಚಿಕಿತ್ಸೆ ಕೊಡುವ ವ್ಯವಸ್ಥೆ ಇಲ್ಲ. ಕೇಂದ್ರ ಸ್ಥಾನದಲ್ಲಿ ಯಾರೂ ಡಾಕ್ಟರ್‌ಗಳು ಇಲ್ಲದೆ ಅವರವರ ಮನೆಗಳಿಗೆ ಹೋಗತಕ್ಕಂತಹ ಕೆಲಸವಾಗಿದೆ. ಜೊತೆಗೆ ಸಮಯಕ್ಕೆ ಸರಿಯಾಗಿ ಯಾರು ಡಾಕ್ಟಾರ್ ಬರುವುದಿಲ್ಲ. ಆಸ್ಪತ್ರೆಯಲ್ಲಿ ನಿಗಧಿತ ಕೆಲಸದವೇಳೆ 9 ಗಂಟೆ ಎಂದು ಇದ್ದರೆ ಅವರು 11 ಗಂಟೆಗೆ ಬರುತ್ತಾರೆ. ಒಂದು ಗಂಟೆ, ಎರಡು ಗಂಟೆ ರೋಗಿಗಳನ್ನು ನೋಡುತ್ತಾರೆ, ಸರಿಯಾದ ರೀತಿಯಲ್ಲಿ ಔಷಧಿಗಳನ್ನು ಕೊಡುವುದಿಲ್ಲ. ಈ ನಿಟ್ಟಿನಲ್ಲಿ ಸಮರ್ಪಕವಾದ ಶಿಸ್ತಿನ ಕ್ರಮವನ್ನು ಅವರ ಮೇಲೆ ಜರುಗಿಸಬೇಕೆಂದು ಮಾನ್ಯ ಆರೋಗ್ಯ ಸಚಿವರಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಉಚ್ಚಗಾಂವ್‌ನಲ್ಲಿ ಹೆಚ್ಚುವರಿ ಹಾಲಿ ಕಟ್ಟಡಗಳು ಮತ್ತು ಸಹಾಯಧನ ಬಿಡುಗಡೆ

190 (1775) ಶ್ರೀ ಮನೋಹರ್ ಪುನ್ನಪ್ಪ ಕಾಡೊಳ್ಕರ್ (ಉಚ್ಚಗಾಂವ್) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉಚ್ಚಗಾಂವ್ ವಿಧಾನಸಭಾ ಮತಕ್ಷೇತ್ರದಲ್ಲಿ ಕಳೆದ ಹತ್ತು ವರ್ಷಗಳಿಂದ ಶಾಲೆಗಳಿಗೆ ಅನುದಾನ ಮತ್ತು ಸಹಾಯಧನ ಬಿಡುಗಡೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅ) ಈ ಶಾಲೆಗಳಲ್ಲಿ ಶಿಕ್ಷಕರಾಗಿ ಅನೇಕ ವರ್ಷಗಳಿಂದ ಸಂಬಳವಿಲ್ಲದೆ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸದರಿ ಮತಕ್ಷೇತ್ರದಲ್ಲಿ ಹೆಚ್ಚುವರಿ ಶಾಲೆಗಳನ್ನು ಕಟ್ಟಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಇವೆಲ್ಲ ಸಮಸ್ಯೆಗಳ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಮೂಲಭೂತ ಸೌಲಭ್ಯಗಳನ್ನು ಒದಗಿಸದೇ ಇರುವುದರಿಂದ ದಿನಾಂಕ 1-6-87ರ ಪೂರ್ವದಲ್ಲಿ ಪ್ರಾರಂಭವಾದ 4 ಪ್ರೌಢ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲಾಗಿರುವುದಿಲ್ಲ.

ಆ) ಈ ಶಾಲೆಗಳು ಖಾಸಗಿ ವಿದ್ಯಾಸಂಸ್ಥೆಗಳಾಗಿದ್ದು ಇದರ ಸಿಬ್ಬಂದಿ ವೇತನವನ್ನು ಆಯಾ ಶಾಲಾ ಆಡಳಿತ ಮಂಡಳಿಗಳೇ ನೀಡಬೇಕಾಗಿರುತ್ತದೆ.

ಇ) ಬಂದಿದೆ

ಈ) ಆದ್ಯತೆ ಮೇರೆಗೆ ಹಾಗೂ ಆಯವ್ಯಯ ಲಭ್ಯತೆ ಅನುಸಾರ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಮನೋಹರ ಪುನ್ನಪ್ಪ ಕಾಡೋಲ್ಕರ್ : ಮಾನ್ಯ ಅಧ್ಯಕ್ಷರೆ, ನಾನು ಕನ್ನಡ ಭಾಷೆಯನ್ನು ಕಲಿಯಲು ಈಗ ಪ್ರಯತ್ನ ಪಡುತ್ತಿರುವುದರಿಂದ ಸದ್ಯಕ್ಕೆ ನನಗೆ ಹಿಂದಿಯಲ್ಲಿ ಮಾತನಾಡಲು ಅನುಮತಿ ಕೊಡಬೇಕೆಂದು ವಿನಂತಿ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ: ಕನ್ನಡ ಬರದಿದ್ದರೆ ಕನ್ನಡವನ್ನು ಹಿಂದಿಗೆ ಭಾಷಾಂತರ ಮಾಡಿಕೊಂಡು ಓದಬೇಕು.

ಅಧ್ಯಕ್ಷರು : ಮಾನ್ಯ ಸದಸ್ಯರು ಕನ್ನಡ ಬರುವುದಿಲ್ಲವೆಂದು ಹಿಂದಿಯಲ್ಲಿ ಮಾತನಾಡಲು ಅನುಮತಿಯನ್ನು ಕೇಳಿದ್ದಾರೆ. ನಾನು ಈಗ ಹೇಳುವುದೇನೆಂದರೆ ಸದನದಲ್ಲಿ ಯಾರಿಗೆ ಕನ್ನಡ ಬರುವುದಿಲ್ಲ ಅಂಥವರಿಗೆ ಕನ್ನಡ ಕಲಿಸುವ ಏರ್ಪಾಡನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಮಾಡಬೇಕು. ಈಗ ಮಾನ್ಯ ಸಚಿವರು ಉತ್ತರ ಕೊಡಬೇಕು.

ಶ್ರೀ ಹೆಚ್.ವಿಶ್ವನಾಥ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಕನ್ನಡ ಹಾಗೂ ಆಂಗ್ಲ ಭಾಷೆಗಳೆರಡರಲ್ಲೂ ಉತ್ತರವನ್ನು ಕೊಡಲಾಗಿದೆ. ಉಚ್ಚಗಾಂವ್ ಕ್ಷೇತ್ರದಲ್ಲಿ 1987ಕ್ಕೂ ಮುಂಚೆ ನಾಲ್ಕು ಖಾಸಗಿ ಪ್ರೌಢಶಾಲೆಗಳು ಪ್ರಾರಂಭವಾಗಿದೆ. ಆ ಶಾಲೆಗಳಿಗೆ ಅನುದಾನವನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ. ಇದಕ್ಕೆ ಕಾರಣ ಅವರು ಅನುದಾನ ಕೊಡುವುದಕ್ಕೆ ಆಗುವುದಿಲ್ಲ. 1987ರ ನಂತರ ಪ್ರಾರಂಭವಾಗಿರುವ ಮೂರು ಶಾಲೆಗಳು ಶಾಶ್ವತ ಅನುದಾನರಹಿತ ಶಾಲೆಗಳಾಗಿರುವುದರಿಂದ ಅವುಗಳಿಗೂ ಅನುದಾನವನ್ನು ಸರ್ಕಾರ ಕೊಡುವುದಕ್ಕೆ ಆಗುವುದಿಲ್ಲ. ಇನ್ನು ನಾವು ಸರ್ಕಾರಿ ಶಾಲೆಗಳಿಗೆ ಕಟ್ಟಡ ಕೊಠಡಿ ಕಟ್ಟುವುದಕ್ಕೆ ಹಾಗೂ ಶಾಲೆಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಮನೋಹರ ಪುನ್ನಪ್ಪ ಕಾಡೋಲ್ಕರ್ : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕರ್ನಾಟಕದಲ್ಲಿರುವ ಶಾಲೆಗಳಿಗೆ ಸರ್ಕಾರದವರು ಬೇಗನೇ ಅನುದಾನವನ್ನು ಕೊಡುತ್ತಾರೆ. ಆದರೆ ಉತ್ತರ ಕರ್ನಾಟಕದ ಭಾಗದ ಶಾಲೆಗಳಿಗೆ ಏಕೆ ಬೇಗ ಅನುದಾನವನ್ನು ಕೊಡುವುದಿಲ್ಲ? ಇವರ ಅನುದಾನ ಸಂಹಿತೆಯ ಷರತ್ತುಗಳಲ್ಲಿ ಕೆಲವನ್ನು ಪಾಲಿಸದಿದ್ದರೂ ಸಹ ದಕ್ಷಿಣ ಕರ್ನಾಟಕ ಭಾಗದ ಶಾಲೆಗಳಿಗೆ ಅನುದಾನವನ್ನು ಕೊಡುತ್ತಾರೆ.

(ಮಾನ್ಯ ಸದಸ್ಯರು ಹಿಂದಿಯಲ್ಲಿ ಮಾತನಾಡಿದ್ದನ್ನು ಕನ್ನಡಕ್ಕೆ ತರ್ಜುಮೆ ಮಾಡಲಾಗಿದೆ)

ಶ್ರೀ ಎಚ್. ವಿಶ್ವನಾಥ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡುತ್ತಾ ನಾವು ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ಭಾಗದ ಶಾಲೆಗಳಿಗೆ ಅನುದಾನ ಕೊಡುವಲ್ಲಿ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದ್ದೇವೆ ಎಂದಿದ್ದಾರೆ. ಅದು ಖಂಡಿತ ಇಲ್ಲ. ಅನುದಾನ ಶಾಲೆಗಳು ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿಯೇ ಇರುವುದು. ದಿನಾಂಕ 01-06-1987ರವರೆಗೆ ಯಾವ ಯಾವ ಶಾಲೆಗಳು ಅನುದಾನ ಸಂಹಿತೆಯಲ್ಲಿನ ಷರತ್ತುಗಳನ್ನು ಪರಿಪೂರ್ಣ ಮಾಡಿವೆಯೋ ಅವಕ್ಕೆಲ್ಲಾ ಅನುದಾನವನ್ನು ಕೊಡಲಾಗಿದೆ. ಒಂದು ವೇಳೆ ಅಂಥ ಶಾಲೆಗಳಿಗೆ ಅನುದಾನವನ್ನು ಕೊಟ್ಟಿಲ್ಲವೆಂದರೆ ಅದನ್ನು ಅವರು ಹೇಳಲಿ; ಬಂದಿರುವುದು ಶಾಶ್ವತ ಅನುದಾನರಹಿತ ಶಾಲೆಗಳಾಗಿರುವುದರಿಂದ ಆ ಶಾಲೆಗಳಿಗೆ ಸರ್ಕಾರ ಅನುದಾನವನ್ನು ಕೊಡುತ್ತಿಲ್ಲ.

ಭಟ್ಕಳ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯ ದುರಸ್ತಿ

199 (1725) ಶ್ರೀ ನಾಯಕ್ ಜೆ.ಡಿ. (ಭಟ್ಕಳ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭಟ್ಕಳ ತಾಲ್ಲೂಕಿನ ಸಾರ್ವಜನಿಕ ಆಸ್ಪತ್ರೆಯ ದುರಸ್ತಿ ಹಾಗೂ ನವೀಕರಣಕ್ಕೆ ಕೆ.ಹೆಚ್.ಎಸ್.ಡಿ.ಪಿ.ಯಿಂದ ಮಂಜೂರಾದ ಮೊತ್ತವೆಷ್ಟು? ಈಗ ಖರ್ಚಾದ ಮೊತ್ತವೆಷ್ಟು?

ಆ) ಸದರಿ ಯೋಜನೆಯಡಿ ತೆಗೆದುಕೊಂಡ ಕಾಮಗಾರಿಗಳು ಯಾವುವು?

ಇ) ಸದರಿ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಡಾ॥ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಡಿ ಭಟ್ಕಳ ತಾಲ್ಲೂಕು ಆಸ್ಪತ್ರೆಯ ದುರಸ್ತಿ ಹಾಗೂ ನವೀಕರಣಕ್ಕೆ ಒಟ್ಟು ರೂ. 40.35 ಲಕ್ಷ ಅಂದಾಜಿಗೆ ಮಂಜುರಾತಿ ನೀಡಿದ್ದು ಇಲ್ಲಿಯವರೆವಿಗೆ ಒಟ್ಟು ರೂ.44.47 ಲಕ್ಷ ವೆಚ್ಚವಾಗಿರುತ್ತದೆ.

ಆ) ಈ ಯೋಜನೆಯಡಿ ಹಾಲಿ ಇರುವ ಆಸ್ಪತ್ರೆಯನ್ನು 40 ಹಾಸಿಗೆಗಳಿಂದ 50 ಹಾಸಿಗೆಗಳಿಗೆ ಅಭಿವೃದ್ಧಿ ಪಡಿಸಲಾಗುವುದು.